ವಿಷಯ: ಮಾಲೂರು ಎ.ಪಿ.ಎಂ.ಸಿ. ರಸ್ತೆಗಳ ಅಭಿವೃದ್ಧಿ

1121 (2139) ಶ್ರೀ. ಹೆಚ್.ಬಿ. ದ್ಯಾವರಪ್ಪ (ಮಾಲೂರು):- ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಲೂರು ತಾಲ್ಲೂಕಿನಲ್ಲಿ ಕೃಷಿ ಮಾರುಕಟ್ಟೆ ಇಲಾಖೆಯವರು ರಸ್ತೆಗಳ ಅಭಿವೃದ್ಧಿಗೆ ಖರ್ಚು ಮಾಡಲು ನಿಗದಿಪಡಿಸಿರುವ ಹಣವೆಷ್ಟು? ಇದುವರೆಗೂ ಖರ್ಚಾದ ಹಣವೆಷ್ಟು?

ಆ) ಈ ರಸ್ತೆಯ ಕಾಮಗಾರಿಗಳು ಪೂರ್ತಿಯಾಗಲು ಇನ್ನೂ ಎಷ್ಟು ಕಾಲಾವಧಿ ಬೇಕಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ಮಾಲೂರು ವಿಧಾನ ಸಭಾ ಮತಕ್ಷೇತ್ರಕ್ಕೆ 1995-96ನೇ ಸಾಲಿಗೆ ರಸ್ತೆಗಳ ಅಭಿವೃದ್ಧಿಗಾಗಿ ರೂ 15.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದುವರೆವಿಗೂ ರೂ. 2,30,453-00 ಖರ್ಚು ಮಾಡಲಾಗಿದೆ.

ಆ) ಆದಷ್ಟು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ವಿಷಯ:- ಕುಂದಾಪುರ ತಾಲ್ಲೂಕಿನಲ್ಲಿ ಕೃಷಿ ಅಧಿಕಾರಿಗಳು.

1122 (1858) ಶ್ರೀ ಐ. ಎಂ. ಜಯರಾಮಶೆಟ್ಟಿ (ಬೈಂದೂರು):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಮಂಜೂರಾದ ಎಲ್ಲಾ ರೇಂಜ್‌ಗಳಲ್ಲಿ ಸಹಾಯಕ ಕೃಷಿ ಅಧಿಕಾರಿಗಳು ಮತ್ತು ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬ ಕೃಷಿ ಸಹಾಯಕರು ಇರುತ್ತಾರೆಯೇ?

ಆ) ಇಲ್ಲದಿದ್ದಲ್ಲಿ ಕೊರತೆ ನೀಗಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

ಇ) ಈಗಿರುವ ಕ್ಷೇತ್ರ ಸಿಬ್ಬಂದಿಗಳಿಂದ ಸಕಾಲದಲ್ಲಿ ಕಾರ್ಯಕ್ರಮ ಅನುಷ್ಠಾನ ಸಾಧ್ಯವಾಗುತ್ತದೆಯೇ?

ಈ) ಅವರಿಂದ ಕೃಷಿ ಸಂದೇಶಗಳು ಸಕಾಲದಲ್ಲಿ ದುರ್ಬಲ ವರ್ಗದ ರೈತರಿಗೆ ತಲುಪುತ್ತಿದೆಯೇ?

ಉ) ಹಿಂದಿನ ಎರಡು ವರ್ಷಗಳಲ್ಲಿ ದುರ್ಬಲ ವರ್ಗದ ರೈತರ ಬಗ್ಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ಇಲ್ಲ.

ಆ) ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.

ಇ) ಹೌದು.